# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.

**ಸಿ. ಸಿ. ನಂ.ಃ 77/2016**

| | | |
|---|---|---|
| ಹೆಸರು | ಪೂರ್ಣೇಶ | **ದಿಃ 14-07-2022** |
| ತಂದೆ ಹೆಸರು | ನಿಂಗೇಗೌಡ | |
| ವಯಸ್ಸು | 47 ವರ್ಷ | **ಪಿಡಬ್ಲ್ಯೂಃ 1** |
| ಉದ್ಯೋಗ | ವ್ಯವಸಾಯ | **ಸಿಡಬ್ಲ್ಯೂಃ 2** |
| ವಾಸ | ದಬ್ಬೆ ಗ್ರಾಮ. | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

–

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇರುತ್ತದೆ.

ಈಗ ತೋರಿಸಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಮಾದರಿ ಸೀಲಿನ ನಕಲು ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ಬೇಲೂರಿನಲ್ಲಿ ಸಂತೆಗೆ ಬಂದಿದ್ದಾಗ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ. ಸಹಿಯನ್ನು ಮೂರು ವರ್ಷಗಳ ಹಿಂದೆ ಮಾಡಿರುತ್ತೇನೆ.

ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ತೋರಿಸಿದ ಮೂರು ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರ್ತಿಸಿರುವುದಿಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ **03-12-2017** ರಂದು ಸಂಜೆ **4ಃ15** ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ದಬ್ಬೆ ಗ್ರಾಮಕ್ಕೆ ಬಂದು ಪಂಚಾಯತಿ ಕಛೇರಿ ಮುಂದೆ ನಿಂತಿದ್ದ ನನ್ನನ್ನು ಮತ್ತು ಚಾಸಾ-**1** ರವರನ್ನು ಕರೆದು ಬಂದ ಮಾಹಿತಿಯನ್ನು ತಿಳಿಸಿ, ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದಕ್ಕೆ ನಾವು ಒಪ್ಪಿ ಅಬಕಾರಿ ನಿರೀಕ್ಷಕರೊಂದಿಗೆ ಆರೋಪಿ ಮನೆಯ ಹತ್ತಿರ ಹೋದೆವು ಎಂದರೆ ಸರಿಯಲ್ಲ. ಮನೆಯಲ್ಲಿದ್ದ ವ್ಯಕ್ತಿಯನ್ನು ಕರೆದು ಬಂದ ಮಾಹಿತಿ ತಿಳಿಸಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಮನೆಯನ್ನು ಪರಿಶೀಲನಿ ಮಾಡಿದಾಗ ಮನೆಯಲ್ಲಿ **2** ಲೀ ಸಾಮರ್ಥ್ಯದ ಕ್ಯಾನ್ ನಲ್ಲಿ **2** ಲೀ ಕಳ್ಳಭಟ್ಟಿ ಸಾರಾಯಿ, **3** ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ **15** ಲೀ ನಂತೆ ಒಟ್ಟು **45** ಲೀ ಬೆಲ್ಲದ ಕೊಳೆ ಇತ್ತು, ನಂತರ ದೊರೆತ ವಸ್ತುಗಳ ಬಗ್ಗೆ ಆರೋಪಿಯನ್ನು ಕೇಳಿದಾಗ ತನಗೆ ಸೇರಿದ್ದು ಎಂದು ಒಪ್ಪಿಕೊಂಡರು ಎಂದರೆ ಸರಿಯಲ್ಲ. ನಂತರ ದೊರೆತ ಕಳ್ಳಭಟ್ಟಿ ಸಾರಾಯಿಯಿಂದ ಹಾಗೂ ಬೆಲ್ಲದ ಕೊಳೆ ಪೈಕಿ ತಲಾ 500 ಎಂ ಎಲ್ ನಂತೆ 3 ಪ್ಲಾಸ್ಟಿಕ್ ಬಾಟಲಿಗಳನ್ನು ರಾಸಾಯನಿಕ ಪರಿಕ್ಷೆಗಾಗಿ ಮಾದರಿ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ಇಲಾಖಾ ಸೀಲು ಹಾಕಲಾಯಿತು ಎಂದರೆ ಸರಿಯಲ್ಲ. ಚಿಕ್ಕ ಚೀಟಿಗಳಿಗೆ ವಿವರ ಬರೆದು ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಮಾದರಿ ಸೀಲಿನ ನಕಲನ್ನು ತಯಾರಿಸಿ ಅದಕ್ಕೂ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಹಾಜರಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ದೇವರಾಜೇಗೌಡ ಬಿನ್ ತಿಮ್ಮೇಗೌಡ ದಬ್ಬೆ ಗ್ರಾಮ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ದೊರೆತ ಎಲ್ಲಾ ಸ್ವತ್ತುಗಳನ್ನು ವಶಕ್ಕೆ ಪಡೆದು ನನ್ನ ಹಾಗೂ ಚಾಸಾ-**1** ರವರ ಸಮಕ್ಷಮ ನಿಪಿ-**1** ರಂತೆ ಸಂಜೆ **4ಃ30** ರಿಂದ **5ಃ35** ವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-**1** ಮತ್ತು **2** ಕ್ಕೆ ನಾನು ಓದಿ ನೋಡಿ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**1** ಮತ್ತು **2** ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಕೆ ವಿ ಆರ್  ರವರಿಂದಃ</u>**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್  ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.

Case called again.

Accused No.1 present. Accused No.2 to 6 absent.

CW-1 and 2 are present. They are examined as PW-1 and 2 respectively. Ex.P-1 to P-3, P-1(a), P-2(a) are marked.

The said material witnesses found to be turned hostile.

The Learned APP seeks to issue Summons to other witnesses. Since the material witnesses turned hostile, no purpose will be served if the summons is issued to other witnesses.

Hence, prayer of Learned APP is rejected.

The statement of accused U.s 313 of CrPC is also hereby dispensed.

A memo is filed by the Counsel for the accused No.1 to 6 stating that the earlier surety bond executed by them may be considered as bond executed towards compliance of provisions of sec. 437-A of CrPC.

Heard arguments.

For Judgment by: 27-12-2021.

**Civil Judge and JMFC, Belur.**